ಶ್ರೀಮತಿ ರೇಶ್ಮಾಶಂಕರಿ
ಅಧ್ಯಕ್ಷರು

ವಿಟ್ಲಪಡ್ನೂರು ಗ್ರಾಮ ಪಂಚಾಯತ್
ಅಂಚೆ: ಕೊಡಂಗಾಯಿ ಬಂಟ್ವಾಳ ತಾಲೂಕು, ದ.ಕ
Email: vitlapadnurgp@gmll.com
ಫೋ: 08255-263321
ಮೊ: 9449532109

ದಿನಾಂಕ: 07-09-2021

ದಿನಾಂಕ: 07-09-2021 ರಂದು ಕೆಲವೊಂದು ದಿನಪತ್ರಿಕೆಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವಿಟ್ಲಪಡ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೊಡಂಗಾಯಿ ಎಂಬಲ್ಲಿ ಅಕ್ರಮ ಕಟ್ಟಡ ನಿರ್ಮಾಣದ ಬಗ್ಗೆ ವರದಿ ಪ್ರಕಟವಾಗಿದ್ದು, ಈ ಬಗ್ಗೆ ಸ್ಪಷ್ಟೀಕರಣ ನೀಡಿಕೆ:

ಸಾಲೆತ್ತೂರು-ವಿಟ್ಲ ರಾಜ್ಯ ಹೆದ್ದಾರಿ ಕೊಡಂಗಾಯಿ ಎಂಬಲ್ಲಿ ಅಕ್ರಮ ಕಟ್ಟಡ ನಿರ್ಮಾಣದ ಬಗ್ಗೆ ಮಾಹಿತಿ ಬಂದಿದ್ದು, ಮಾಹಿತಿ ಬಂದ ತಕ್ಷಣವೇ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಸ್ಥಳಕ್ಕೆ ಹೋಗಿ ಪರಿಶೀಲಿಸಿ ಸುಲೈಮಾನ್ ಬಿನ್, ಮಹಮ್ಮದ್ ಬ್ಯಾರಿ ಕೊಡಂಗಾಯಿ ಎಂಬ ವ್ಯಕ್ತಿಗೆ ಕರ್ನಾಟಕ ಗ್ರಾಮ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 64ರ ಅನ್ವಯ ಲಿಖಿತ ಅನುಮತಿ ಇಲ್ಲದೇ ಅಕ್ರಮ ಕಟ್ಟಡ ನಿರ್ಮಿಸಿರುವ ಬಗ್ಗೆ ತೆರವುಗೊಳಿಸುವಂತೆ ನೋಟೀಸು ನೀಡಿರುತ್ತಾರೆ. ಅನಂತರ ಕಳೆದ 2 ದಿನಗಳ ಹಿಂದೆ ಸರಕಾರಿ ರಜಾದಿವಸ ಹಾಗೂ ರಾತ್ರಿ ವೇಳೆಯಲ್ಲಿ ಮತ್ತೆ ಕಟ್ಟಡ ನಿರ್ಮಾಣಕ್ಕೆ ತೊಡಗಿರುವುದು ಕಂಡು ಬಂದಿರುತ್ತದೆ ಈ ದಿವಸ (ದಿ: 07-09-2021) ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಪಂಚಾಯತ್ ಸದಸ್ಯರುಗಳು ಮಾಧ್ಯಮದಲ್ಲಿ ಬಂದ ಮಾಹಿತಿಯ ಬಗ್ಗೆ ಉಲ್ಲೇಖಿಸಿ ಚರ್ಚಿಸಲಾಗಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ 15 ಸದಸ್ಯರು ಸರ್ವಾನುಮತದಿಂದ ಅಕ್ರಮ ಕಟ್ಟಿರುವ ಕಟ್ಟಡವನ್ನು ತೆರವುಗೊಳಿಸಲು ರಾಜ್ಯ ಹೆದ್ದಾರಿ ಪ್ರಾಧಿಕಾರ (PWD) ಇಲಾಖೆಗೆ ಪತ್ರ ಬರೆಯುವುದು ಹಾಗೂ ಪಂಚಾಯತ್‌ನಿಂದ ನೀಡಿದ ನೋಟೀಸನ್ನು ಧಿಕ್ಕರಿಸಿ ಅಕ್ರಮ ಕಟ್ಟಡವನ್ನು ನಿರ್ಮಿಸಲು ಹೊರಟಿರುವ ಸುಲೈಮಾನ್ ಇವರು ಸಮಾಜದ ಸ್ವಾಸ್ಥ್ಯತೆಯನ್ನು ಕೆಡಿಸಲು ಹೊರಟಿರುವ ವ್ಯಕ್ತಿಯ ಮೇಲೆ ಪೋಲೀಸು ಇಲಾಖೆಗೂ ದೂರು ನೀಡಲು ಸರ್ವಾನುಮತದಿಂದ ನಿರ್ಣಯ ಕೈಗೊಂಡಿರುತ್ತೇವೆ.

ಅಕ್ರಮ ಕಟ್ಟಡ ನಿರ್ಮಾಣ ಮಾಡಲು ಯಾವುದೇ ಕಾರಣಕ್ಕೂ ವಿಟ್ಲಪಡ್ನೂರು ಗ್ರಾಮ ಪಂಚಾಯತ್ ಅವಕಾಶ ನೀಡಿರುವುದಿಲ್ಲ ಮತ್ತು ಕಾನೂನು ರೀತಿಯಲ್ಲಿ ಅಕ್ರಮ ಕಟ್ಟಡವನ್ನು ತೆರವುಗೊಳಿಸಲು ಪಂಚಾಯತ್ ಆಡಳಿತ ಬದ್ಧವಾಗಿರುತ್ತದೆ ಎಂದು ಈ ಮೂಲಕ ಸ್ಪಷ್ಟೀಕರಣ ನೀಡುತ್ತಿದ್ದೇವೆ.

ಅಧ್ಯಕ್ಷರು
ವಿಟ್ಲ ಪಡ್ನೂರು ಗ್ರಾಮ ಪಂಚಾಯತ್
ಬಂಟ್ವಾಳ ತಾಲೂಕು, ದ.ಕ.